## ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜಮಖಂಡಿ.

ಸಿ.ಸಿ. ನಂ– 896/2022

DW–2

ದಿನಾಂಕಃ 23.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪಿರ್ಯಾದಿ ಪರವಾಗಿ ಶ್ರೀ. ಎ.ಜಿ.ಬಿ. ವಕೀಲರಿಂದ**–ನಾನು ಈಗ ಜಮಖಂಡಿಯಲ್ಲಿ ಖಾಸಗಿ ಕೆಲಸ ಮಾಡಿಕೊಂಡಿದ್ದೇನೆ. ಪಿವಿಟಿ ಸರ್ವೀಸ್ ಎಂದರೆ ಪ್ರೈವೇಟ್ ಸರ್ವೀಸ್. ಸಂಗನಗೌಡ ಬಿರಾದಾರ ಇವರು ಅಪ್ಪಾಸಾಹೇಬ ಇವರ ವಿರುದ್ಧ ಈ ಪ್ರಕರಣ ದಾಖಾಲಿಸಿದ್ದಾರೆ. ಈ ಪ್ರಕರಣವನ್ನು ಚೆಕಬೌನ್ಸ ಕೇಸು ಎಂದು ದಾಖಲಿಸಿದ್ದಾರೆ. ಆರೋಪಿ ಪಿರ್ಯಾದಿ ಕಡೆಯಿಂದ ಸಾಲ ಪಡೆದಿಲ್ಲ. ಅವರ ತಾಯಿ ಶಾಂತವ್ವ ದುಗ್ಗಾಣಿ ಇವರು ಸಾಲ ಪಡೆದುಕೊಂಡಿದ್ದರು. ಈ ವಿಷಯ ಆರೋಪಿಗೆ ಗೊತ್ತಿತ್ತು. ಪಿರ್ಯಾದಿಯು ಆರೋಪಿಗೆ ನೋಟೀಸು ನೀಡಿದ ಬಗ್ಗೆ ನನಗೆ ಗೊತ್ತಿಲ್ಲ. ಬಾಂಡ್ ಬರೆಸುವ ಸಮಯದಲ್ಲಿ ನಾನು, ಸಂಗಮೇಶ ಬಿರಾದಾರ, ಸುಭಾಷ ಮಲಕಪ್ಪನವರ, ಬಸಪ್ಪ ಕತ್ತಿ, ಬಸವರಾಜ ಸಿಂದೂರ ಇದ್ದೆವು. ಈ ಪ್ರಕರಣದಲ್ಲಿ ಯಾವ ಯಾವ ದಾಖಲೆಗಳನ್ನು ನೀಡಿದ್ದಾರೆ ಎಂಬ ಮಾಹಿತಿ ನನಗೆ ಇದೆ. ಸದರಿ ಬಾಂಡ್ ಅನ್ನು ಲಾಡ್ ಇವರ ಕಚೇರಿಯಲ್ಲಿದ್ದ ಟೈಪಿಸ್ಟ ಅವರು ಇಂಗ್ಲೀಷ ನಲ್ಲಿ ಬರೆದಿರುತ್ತಾರೆ. ಸಾಕ್ಷಿಯು ಮತ್ತೆ ಯೋಚಿಸಿ ಬಾಂಡನ್ನು ಕನ್ನಡದಲ್ಲಿ ಬರೆದಿದ್ದಾರೆ ಎಂದು ನುಡಿಯುತ್ತಾರೆ. ಬಾಂಡ ಬರೆಯುವಾಗ ನಾನು ಅಲ್ಲಿ ಇದ್ದೆ. ಬಾಂಡನ್ನು ಹೀಗೆ ಬರೆಯಲು ನಾವೆಲ್ಲರೂ ಸೇರಿ ಮಾಹಿತಿ ಲಾಡ್ ವಕೀಲರಿಗೆ ನೀಡಿರುತ್ತೇವೆ.

ನಮ್ಮ ವ್ಯವಹಾರಕ್ಕೆ ನಾವು ಇದೇ ರೀತಿ ಬಾಂಡಗಳನ್ನು ನಾವು ಮಾಡಿಕೊಂಡಿದ್ದೇವೆ. ಬಾಂಡ ಮೇಲೆ ದಸ್ತೂರು ಇವರ ಸಹಿ ಇರುತ್ತದೆ ಎಂದರೆ ಸರಿ. ಸದರಿ ಬಾಂಡ ಮೇಲ ದಸ್ತೂರ ಅಂತಾ ಯಾರ ಸಹಿ ಇದೆ ಗೊತ್ತಿಲ್ಲ. ಸದರಿ ಬಾಂಡ ಅನ್ನು ಪಿರ್ಯಾದಿ ಬೆಳಗ್ಗೆ 11.00 ಗಂಟೆಗೆ ತೆಗೆದುಕೊಂಡು ಬಂದರು. ಲಾಡ್ ವಕೀಲರು ಈಗ ಜೀವಂತ ಇಲ್ಲ, ಅವರು ಮೃತಪಟ್ಟಿದ್ದಾರೆ ಎಂದರೆ ಸರಿ. ಸಾಕ್ಷಿಗೆ ನಿಡಿ–3 ಬಾಂಡ ಅನ್ನು ತೋರಿಸಿ ಅದರಲ್ಲಿ ದಸ್ತೂರ ಅಂತಾ ಸಹಿ ಇದೆ ಎಂದರೆ ಹೌದು ಎಂದು ನುಡಿಯುತ್ತಾರೆ. ಬಾಂಡನಲ್ಲಿ ಕನ್ನಡದಲ್ಲಿ ಟೈಪ್ ಮಾಡಿ ಅಂತಾ ವಕೀಲರು ತಿಳಿಸಿರುತ್ತಾರೆ. ಬಾಂಡನ್ನು ಟೈಪ್ ಮಾಡಿದವರ ಹೆಸರು ಹಾಗೂ ಅವರ ಸಹಿ ಇಲ್ಲ ಎಂದರೆ ಸರಿ. ಸಹಿ ಮಾಡಿ ಎಂದು ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ. ಚೆಕ್ಕಿನ ಮೊತ್ತ ಎಷ್ಟು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರಿದು ಅವರ ಹತ್ತಿರ 3 ಚೆಕ್ಕು ಇತ್ತು.

ಬಾಂಡ ಮೇಲೆ ಇರುವ ಫೋಟೋವನ್ನು ಸಾಕ್ಷಿಗೆ ತೋರಿಸಲಾಗಿ ಅದು ವಾಟ್ಸಅಪ್ ಡಿಪಿ ಇಂದ ಡೌನಲೋಡ್ ಮಾಡಿದ ಫೋಟೋ ಎಂದರೆ ಸಾಕ್ಷಿಯು ಫೋಟೋವನ್ನು

ಪಿರ್ಯಾದಿಯೇ ಹೊಡೆದಿದ್ದಾರೆ. ಫೋಟೋ ನಿದ್ದೆ ಮಾಡುವ ರೀತಿಯಲ್ಲಿ ಇದೆ ಎಂದರೆ ಸಾಕ್ಷಿಯು ಸಂಗಮೇಶ ಪಿರ್ಯಾದಿ ಇವರು ನೀಡಿದ ಫೋಟೋವನ್ನು ಅಂಟಿಸಿರುತ್ತಾರೆ. ಸದರಿ ವ್ಯವಹಾರವನ್ನು ಯಾರು ವಿಡಿಯೋ ಮಾಡಿದರು ಎಂದರೆ ಬಸಪ್ಪ ಕತ್ತಿ ಎಂದು ನುಡಿಯುತ್ತಾರೆ. ಬಸಪ್ಪ ಕತ್ತಿ ಇವರು ಜಮಖಂಡಿಯ ಕುಂಚನೂರು ರಸ್ತೆಯ ದಾನಮ್ಮದೇವಿ ಗುಡಿಯ ಹತ್ತಿರ ವಾಸಮಾಡಿಕೊಂಡಿದ್ದಾರೆ. ಅವರು ಒಕ್ಕಲುತನ ಕೆಲಸ ಮಾಡಿಕೊಂಡಿದ್ದಾರೆ. ಸದರಿ ವಿಡಿಯೋವನ್ನು ಸಿಡಿಗೆ ಪರಿವರ್ತಿಸಿದವರ ಹೆಸರು ಗೊತ್ತಿಲ್ಲ. ವಿಡಿಯೋ ಮಾಡಿಕೊಂಡ ಮೊಬೈಲ್ ಯಾವ ಕಂಪನಿಯದು ಎಂದು ನನಗೆ ಗೊತ್ತಿಲ್ಲ. ವ್ಯವಹಾರ ಆಗಿದೆ, ಅದನ್ನು ವಿಡಿಯೋ ಮಾಡಲಾಗಿದೆ ಎಂದುಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪಿರ್ಯಾದಿ ಇದೇ ರೀತಿ ಸಾಕಷ್ಟು ಜನರಿಗೆ ಮೋಸ ಮಾಡಿದ್ದು ನನಗೆ ಮೋಸ ಆಗಬಾರದು ಎಂಬ ಉದ್ದೇಶದಿಂದ ಅದನ್ನು ವಿಡಿಯೋ ಮಾಡಿಕೊಂಡಿರುತ್ತೇನೆ. ಗುರುರಾಜ ಸಿಂಧೂರ, ಸದಾಶಿವ ಟಕ್ಕಳಕಿ, ಸದಾಶಿವ ಶಿರಗುಪ್ಪಿ, ಬಿರಾದಾರ ತುಬಚಿ ಇವರಿಗೆ ಪಿರ್ಯಾದಿ ಮೋಸ ಮಾಡಿರುತ್ತಾರೆ. ಈ ಮಾತು ಸುಳ್ಳು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನಮ್ಮ ಕಣ್ಣ ಮುಂದೆಯೇ ನಡೆದಿರುತ್ತದೆ ಎಂದು ನುಡಿಯುತ್ತಾರೆ. ಅವರ ಸಾಕ್ಷಿ ಮಾಡಿಸಿರುವುದಿಲ್ಲ. ದಿನಾಂಕಃ 02.05.2022 ರಂದು ಆರೋಪಿ ಸಂಗಮೇಶ ಬಿರಾದಾರ ಇವರ ಮನೆಯಲ್ಲಿ ಹಣವನ್ನು ಮರಳಿ ನೀಡಿರುತ್ತಾರೆ. ಸದರಿ ವಿಷಯವನ್ನು ಲಾಡ್ ವಕೀಲರಿಗೆ ಹೇಳಿರುತ್ತೇನೆ. ಈ ವಿಷಯ ಬಾಂಡನಲ್ಲಿ ಇಲ್ಲ ಅದು ಸುಳ್ಳು ಎಂದರೆ ಸರಿಯಲ್ಲ.

ನಾನು, ಆರೋಪಿ ಹಾಗೂ ಇತರರು ಸೇರಿಕೊಂಡು ನಿಡಿ-3 ದಾಖಲೆಯನ್ನು ತಯಾರಿಸಿ ಸುಳ್ಳು ಸಿಡಿ ತಯಾರಿಸಿದ್ದೇನೆಂದರೆ ಸರಿಯಲ್ಲ. ನಾವು ಸುಳ್ಳು ದಾಖಲೆ ತಾಯಾರಿಸಿದ್ದರಿಂದ ಪಿರ್ಯಾದಿ ನಮಗೆ ನೋಟೀಸು ನೀಡಿದ್ದಾರೆ ಎಂದರೆ ಸರಿಯಲ್ಲ. ನಾನು ಆರೋಪಿಯೊಂದಿಗೆ ಶಾಮೀಲಾಗಿದ್ದು ನನಗೆ ನೋಟೀಸು ತಲುಪಿದ್ದರೂ ಕೂಡ ಪಿರ್ಯಾದಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸಿಡಿಯಲ್ಲಿ ಯಾವ ವಿಡಿಯೋ ಇದೆ ಎಂದು ನನಗೆ ಗೊತ್ತು.

ಆರೋಪಿಯ ತಾಯಿಯ ಹೆಸರು ಶಾಂತವ್ವ. ಅವರು ಮನೆಯ ಕೆಲಸ ಮಾಡುತ್ತಿದ್ದರು. ಶಾಂತವ್ವ ಪಿರ್ಯಾದಿ ಕಡೆಯಿಂದ ಹಣ ಪಡೆಯುವಾಗ ನಾನು ಇರಲಿಲ್ಲ. ಆದರೆ ಅವರು ನನಗೆ ವಿಷಯ ತಿಳಿಸಿರುತ್ತಾರೆ. ಅವರು 3-4 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ಸದರಿ ಪ್ರಕರಣ ದಾಖಲಿಸುವ ಸಮಯದಲ್ಲಿ ಅವರು ಜೀವಂತ ಇರಲಿಲ್ಲ. ಆರೋಪಿ ತನ್ನ ಆಕ್ಸಿಸ್ ಬ್ಯಾಂಕಿನ 3 ಚೆಕ್ಕುಗಳನ್ನು ಪಿರ್ಯಾದಿ ನೀಡಿದ್ದರು. ಒಟ್ಟು ರೂ. 6,10,000/- ಹಣವನು ಪಿರ್ಯಾದಿಗೆ ನೀಡಿದ್ದು ಅದರಲ್ಲಿ ರೂ.10,000/- ಹಣ ಫೋನ್ ಪೇ ಮುಖಾಂತರ ನೀಡಿದ ಬಗ್ಗೆ ದಾಖಲೆಗಳು ಇವೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ವಿಡಿಯೋ ಮಾಡಿರುತ್ತೇವೆ ಎಂದು

ನುಡಿಯುತ್ತಾರೆ. ಫಿರ್ಯಾದಿಗೆ ಹಣ ನೀಡಿದ ಮೇಲೆ ಚೆಕ್ಕನ್ನು ಮರಳಿ ಕೇಳಿದಾಗ ಪಿರ್ಯಾದಿ ಚೆಕ್ಕುಗಳು ತನ್ನ ವಕೀಲರಲ್ಲಿ ಇವೆ ನಂತರ ಕೊಡುತ್ತೇನೆ ಎಂದು ಹೇಳಿರುತ್ತಾರೆ. ಆರೋಪಿಗೆ ವಕೀಲರ ನೋಟೀಸು ಬಂದ ನಂತರ ಆರೋಪಿ ನನಗೆ ಈ ಪ್ರಕರಣ ದಾಖಲಾದ ಬಗ್ಗೆ ಹೇಳಿರುತ್ತಾರೆ. ನಂತರ ನಾವು ಹಿರಿಯರಾದ ಬಿ.ಎಸ್. ಸಿಂಧೂರ ಇವರ ಕಡೆಗೆ ಹೋಗಿ ಕೇಳಿದ್ದೆವು. ಆರೋಪಿಗೆ ನಾವು ಮಾರ್ಗದರ್ಶನ ಮಾಡುತ್ತಿದ್ದೇವು ಎಂದರೆ ಸರಿಯಲ್ಲ. ಬಿ.ಎಸ್. ಸಿಂಧೂರ ಇವರು ಜಮಖಂಡಿಯಲ್ಲಿ ಇರುತ್ತಾರೆ. ಅವರು ಇಲ್ಲಿತನಕ ಸಾಕ್ಷಿಯನ್ನು ಹೇಳಿಲ್ಲ. ಪಿರ್ಯಾದಿಯಿಂದ ಚೆಕ್ ವಾಪಸ್ಸು ಕೇಳಿದ ವರ್ಷ ನೆನಪು ಇಲ್ಲ.

ನಾನು ಆರೋಪಿಗೆ ಪಿರ್ಯಾದಿ ಚೆಕ್ ವಾಪಸ್ಸು ನೀಡಿದ್ದಾರಾ ಎಂದು ವಿಚಾರಿಸಿದ್ದೇನೆ. ನಾವು ಹಣ ಮರಳಿ ನೀಡಿದ್ದು ಹಣದ ಭದ್ರತೆಗಾಗಿ ನೀಡಿದ ಚೆಕ್ಕುಗಳನ್ನು ಮರಳಿನೀಡುವಂತೆ ಪಿರ್ಯಾದಿಗೆ ನೋಟೀಸು ಅಥವಾ ಪಿರ್ಯಾದಿ ಮಾಡಿಲ್ಲ. ಸಾಕ್ಷಿಯು ಮುಂದುವರಿದು ನಾವು ಹಿರಿಯರಾದ ಬಿ.ಎಸ್. ಸಿಂಧೂರ ಇವರ ಹತ್ತಿರ ಕೇಳಿರುತ್ತೇವೆ. ರೂ.10,000/- ಹಣವನ್ನು ಆರೋಪಿಯ ಇವರ ತಾಯಿ ಫೋನ್ ಪೇ ಮಾಡಿದ್ದರು ಎಂದರೆ ಸಾಕ್ಷಿಯು ಆರೋಪಿಯೇ ಮಾಡಿರುರುತ್ತಾರೆ. ಈ ಮಾತು ಸುಳ್ಳು ಎಂದರೆ ಸರಿಯಲ್ಲ. ಆರೋಪಿ ರೂ.10,000/- ಹಣವನ್ನು ಫೋನ್ ಪೇ ಮಾಡಿದ್ದರು ಎಂಬ ದಾಖಲೆ ನೋಡಿಲ್ಲ. ಸಾಕ್ಷಿ ಮುಂದುವರಿದು ಆರೋಪಿ ಪಿರ್ಯಾದಿಯ ಹೆಂಡತಿಗೆ ಫೋನ್ ಪೇ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಬಾಂಡನಲ್ಲಿ ಬರೆದ ವಿಷಯಕ್ಕೂ ಹಾಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಬಾಂಡಿಗೆ ಸರಿ ಹೊಂದುವಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನಾನು ಕಾಮಗೊಂಡ ವಕೀಲರಿಗೆ ಬೇಟಿಯಾಗಿರುತ್ತೇನೆ. ಕಾಮಗೊಂಡ ವಕೀಲರು ಪಿರ್ಯಾದಿಯ ವಕೀಲರಿಗೆ ಪ್ರತ್ಯುತ್ತರ ನೋಟೀಸು ನೀಡಿರುತ್ತಾರೆ. ಅದಕ್ಕೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನಾನು ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ

Sd/-

ಹೆಚ್ಚುವರಿ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ.